# ಸುದ್ದಿ ಸ್ವಾರಸ್ಯ



ನೂತನ ವಧು- ವರರು ಉಂಗುರ ಬದಲಾಯಿಸಿಕೊಂಡಿದ್ದೇ ತಡ, ಮದುವೆ ಉಡುಪು ಕಳಚಿ ಭೋಜನಕ್ಕೆ ಓಡಿದ್ದೇ. ಆದರೆ ಮದುವೆಯೂಟ ಸವಿಯಲು ಕುಳಿತಿದ್ದ ಅತಿಥಿಗಳು ಕಂಗಾಲು. ಪಂಕ್ತಿ ಬಿಟ್ಟೆದ್ದು ಓಡಿದರು. ಅಷ್ಟಕ್ಕೂ ಇದ್ಯಾವ ಮಹಾನುಭಾವರ ವಿವಾಹ ಭೋಜನವಪ್ಪಾ? ಕೈರೋ ಮೃಗಾಲಯದ ಅಧಿಕಾರಿಗಳಿಗೆ ಚಿಂಪಾಂಜಿಗಳ ಮದುವೆ ಮಾಡುವ ಆಲೋಚನೆ ಬಂದಿದ್ದು ಒಳ್ಳೆಯದೇ. ಆದರೆ ಮಾನವ ಅತಿಥಿಗಳನ್ನು ಯಾಕೆ ಕರೆದರೋ?

ಬ್ರೆಜಿಲ್‌ನಲ್ಲಿ ಸಾಂಬಾ ಡ್ಯಾನ್ಸ್, ಕಾರ್ನಿವಲ್‌ಗಳು ಎಲ್ಲಕ್ಕಿಂತ ಈಗ 'ಅಂಡರ್‌ವೇರ್' ದಿನಾಚರಣೆಯದ್ದೇ ಆಕರ್ಷಣೆ. ಇದಕ್ಕೆ ನ್ಯೂಯಾರ್ಕ್ ಸ್ಫೂರ್ತಿಯಂತೆ. ವ್ಯಾಲೆಂಟೈನ್ ದಿನಾಚರಣೆಗಿಂತ ಮುಂಚೆ ಇದನ್ನು ಆಚರಿಸಿದ್ಯಾಕೋ?



ಪತ್ನಿಗೆ ವಿಚ್ಛೇದನ ನೀಡಲು ಕೋರ್ಟ್ ಮೆಟ್ಟಿಲೇರಿರುವ ಇಟಲಿಯ ಪ್ರಧಾನಿ ಸಿಲ್ವಿಯೊ ವ್ಯಾಲೆಂಟೈನ್ ದಿನದಂದು ಒಂಟಿಯಾಗಿರುವುದು ಬೋರೊ ಬೋರು ಎಂದು ಸುಮ್ಮನೆ ಕೂರಲಿಲ್ಲ. ತೊಡೆಯ ಮೇಲೆ ಲ್ಯಾಪ್‌ಟಾಪ್ ಇಟ್ಟುಕೊಂಡು ಮಾಜಿ ಗರ್ಲ್‌ಫ್ರೆಂಡ್ಸ್‌ಗಳಿಗೆ ಇ-ಮೇಲ್‌ನಲ್ಲಿ ಶುಭಾಶಯ ಕಳಿಸಿದರಂತೆ. 73ರ ಹರೆಯದಲ್ಲೂ ಅಷ್ಟೂ ಮಂದಿ ಸ್ನೇಹಿತೆಯರ ನೆನಪಿಟ್ಟುಕೊಂಡಿದ್ದಾರಲ್ಲಾ, ನೆನಪಿನ ಶಕ್ತಿಗೆ ಹ್ಯಾಟ್ಸಾಫ್ ಎಂದಿರಬಹುದು ಸ್ನೇಹಿತೆಯರ ಹೆಸರು ಮರೆತ ಮಂದಿ.

ಜರ್ಮನಿಯು ಅಮೆರಿಕ, ಚೀನಾದ ಮೇಲಿನ ಮುನಿಸನ್ನು ಹೀಗೆ ತೋರಿಸಿಕೊಳ್ಳಬಾರದಿತ್ತು. ಒಬಾಮ ಚೀನಿ ಅಧ್ಯಕ್ಷ ಜಿಂಟಾವೋಗೆ ಹಣದ ಆಸೆ ತೋರಿಸುವ ಕೃತಿ ಈಚೆಗೆ ಜರ್ಮನಿಯ ಉತ್ಸವವೊಂದರಲ್ಲಿ ಮೊದಲ ಸ್ಥಾನ ಪಡೆಯಿತಂತೆ.





ಹರಿದ್ವಾರದ ಈ ನಾಗಾ ಸಾಧುವಿಗೆ 26 ವರ್ಷಗಳಿಂದ ಪುರುಸೊತ್ತೇ ಸಿಕ್ಕಿಲ್ಲ. ಗಾಂಜಾ ಸೇವನೆ, ಬೂದಿಯ ಮೇಕಪ್ ಮಧ್ಯೆ ಉಗುರು ಟ್ರಿಂ ಮಾಡಲು ಸಮಯವಾದರೂ ಎಲ್ಲಿದೆ? ಈ ಉಗುರಿನ ಆಧುನಿಕ ವಿನ್ಯಾಸ ನೈಲ್ ಬಾರ್‌ಗಳಿಗೆ ಒಳ್ಳೆಯ ಮಾದರಿ.

ಕರ್ಗಿಜ್‌ಸ್ತಾನದಲ್ಲಿ ಪಾಸ್‌ಪೋರ್ಟ್ ನೀಡುವ ಕೆಲಸ ಆರಂಭವಾಗಿದೆ. ಜನಕ್ಕಲ್ಲ, ಅಲ್ಲಿರುವ 4.25 ದಶಲಕ್ಷ ಕುರಿಗಳಿಗೆ. ಅದೂ ಹೈಟೆಕ್ ಪಾಸ್‌ಪೋರ್ಟ್‌ಗಳಂತೆ. ಹುಟ್ಟಿನಿಂದ ಕಡಿಯುವವರೆಗೆ ಆ ಕುರಿಗಳ ಬಯೋಡೇಟ ಅರಿಯಲು ಈ ಕ್ರಮವಂತೆ. ಕೊನೆಗೆ ಕುರಿಯಾಗುವವರು ಇದನ್ನು ಪ್ರಕಟಿಸಿದ ಉಪ ಪ್ರಧಾನಿಯೋ, ಅಧಿಕಾರಿಗಳೋ ಅಥವಾ ಬಡತನದಿಂದ ಬಳಲುತ್ತಿರುವ ಪ್ರಜೆಗಳೋ?

ಅಮೆರಿಕದ ಮಿನ್ನೆಪೊಲಿಸ್‌ನಲ್ಲಿ ರಸ್ತೆ ಬದಿ ಹೀಗೊಂದು ಫಲಕ ಕಾಣಿಸಿಕೊಂಡಿದೆ. ಬುಷ್ ಕೂಡಾ ಕ್ಲಿಂಟನ್ ಹಾದಿ ತುಳಿದರೇ ಎಂದು ಜನ ಗುಸುಗುಸು ಮಾಡುವಷ್ಟರಲ್ಲೇ ಹೆಸರು ಹೇಳಲಿಚ್ಛಿಸದ ಸಣ್ಣ ವ್ಯಾಪಾರಿಗಳ ಸಂಘ ಈ ಜಾಹೀರಾತನ್ನು ತಾನು ಹಾಕಿಸಿರುವುದಾಗಿ ಹೇಳಿಕೊಂಡಿತು. ಯಾರಿಗೆ ಯಾರು ಬಾಕಿ ಇಟ್ಟುಕೊಂಡಿದ್ದಾರೋ?




Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65